International Journal of Kannada Research
www.kannadajournal.com

ISSN: 2454–5813
IJKR 2019; 5(3): 37-41
© 2019 IJKR
www.kannadajournal.com
Received: 22-05-2019
Accepted: 24-06-2019

**ಕಲಾವತಿ.ಹೆಚ್.ಕೆ**
ಸಂಶೋಧಕರು. ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಮೈಸೂರು ವಿಶ್ವವಿದ್ಯಾನಿಲು, ಮಾಂನಸಗಂಗೋತ್ರಿ

**ಪ್ರೊ.ಜೆ,ಸೋಮಶೇಖರ್**
ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ

**Correspondence**
**ಕಲಾವತಿ.ಹೆಚ್.ಕೆ**
ಸಂಶೋಧಕರು. ಡಾ.ಬಿ.ಆರ್ ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಮೈಸೂರು ವಿಶ್ವವಿದ್ಯಾನಿಲು, ಮಾಂನಸಗಂಗೋತ್ರಿ

# ಪರಿಶಿಷ್ಟ ಜಾತಿಯ ಶೈಕ್ಷಣಿಕ ಸಬಲೀಕರಣ ವಿಶೇಷವಾಗಿ ಹಾಸನ ಜಿಲ್ಲೆಯ ಒಂದು ಸಮೀಕ್ಷೆ

**ಕಲಾವತಿ.ಹೆಚ್.ಕೆ, ಪ್ರೊ.ಜೆ,ಸೋಮಶೇಖರ್**

ಭಾರತವು ಜಾತ್ಯಾಧಾರಿತ ಸಮಾಜವಾಗಿದ್ದು, ಇಲ್ಲಿ ಮುಖ್ಯವಾಗಿ ಜಾತಿಯೇ ವ್ಯಕ್ತಿಯ ಸ್ಥಾನಮಾನಗಳನ್ನು ನಿರ್ಧರಿಸುತ್ತದೆ. ಪರಿಶಿಷ್ಟ ಜಾತಿಯ ಜನರು ಸಮಾಜಿಕ ಶ್ರೇಣಿಯಲ್ಲಿ ಕೆಳಗಿನ ಜಾತಿಯವರಾಗಿದ್ದು ಪ್ರಾಚೀನ ಕಾಲದಿಂದಲೂ ಶೋಷಣೆಗೆ ಒಳಗಾಗಿದ್ದಾರೆ. ಭಾರತದ ಸಂವಿಧಾನದ 14ನೆಯ ಅನುಚ್ಛೇದವು (ಚಿಡಿಣಟಿಛಿಟಜ) ಪ.ಜಾ ಯ ಜನರಿಗೂ ಸಮಾಜದಲ್ಲಿ ಸಮಾನ ಅವಕಾಶಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ರಚನೆಗೊಂಡಿದೆ ಹಾಗೆಯೇ ಅನುಚ್ಛೇದ 17ರ ಪ್ರಕಾರ ಸಂಕೋಲೆಯ ಬಿಡುಗಡೆಗೆ ಅನೇಕ ಮಹಾನೀಯರು ಹೋರಾಟ ಮಾಡಿದ್ದಾರೆ. ವಿಶೇಷವಾಗಿ ಸಂವಿಧಾನದ ಶಿಲ್ಪಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಲಿಖಿತ ಸಂವಿಧಾನ ಬರೆಯುವುದರ ಮೂಲಕ ಶೋಷಿತ ಮಹಿಳೆಯರಿಗೆ ಮೌಲ್ಯಯುತ ಸ್ಥಾನ ಕಲ್ಪಿಸಿದ್ದಾರೆ. ಭಾರತದ ಸಂವಿಧಾನದ ಅನುಚ್ಛೇದ 14ರ ಪ್ರಕಾರ ಮತ್ತು 17ರ ಪ್ರಕಾರ ಅಸ್ಪೃಶ್ಯತಾ ನಿವಾರಣೆಯ ಕಾನೂನು ಪರಿಶಿಷ್ಟ ಜಾತಿಗಳ ಶೋಷಣೆ ಮತ್ತು ದೌರ್ಜನ್ಯಗಳನ್ನು ತಡೆಯುವಲ್ಲಿ ಪ್ರಮುಖ ಅನುಚ್ಛೇದದಾಗಿ ರಚನೆಗೊಳಸಲಾಗಿದೆ. ಈ ಕಾಯ್ದೆ ಕಾನೂನು ಮೀರಿದವರಿಗೆ ಬೇಲೂರಹಿತ ಶಿಕ್ಷೆ ನೀಡಲಾಗುವುದು ಎಂಬುದನ್ನು ದಂಡ ಸಂಹಿತೆ ತಿಳಸುವುದು ಮತ್ತು ಶಿಕ್ಷಿಸುವುದು ಹಾಗಿದ್ದರೂ ಸಹ ಹಾಸನ ಜಿಲ್ಲೆಯಲ್ಲಿ ಪ್ರತಿ ತಾಲೂಕಿನಲ್ಲಿ ಅಪ್ರಾಪ್ತ ವಯಸ್ಕ ಪರಿಶಿಷ್ಟ ಜಾತಿಗಳ ಮಹಿಳೆಯರ ಮೇಲೆ ಹಲ್ಲೆ ಪ್ರಹಾರ ಕೊಲೆ ಮತ್ತು ಅತ್ಯಾಚಾರದಂತಹ ಹೀನ ಕೃತ್ಯಗಳನ್ನು ಬಹಳಷ್ಟು ಗುರ್ತಿಸಲಾಗಿದೆ. ಅವುಗಳಗೆ ಸಂಬಂಧಿಸಿದ ಕೋಷ್ಟಕಗಳನ್ನು ಮುಂದಿನ ಅಧ್ಯಯನದಲ್ಲಿ ತಿಳಸಲಾಗಿದೆ. ಇವರನ್ನು ಸಮಾಜದಲ್ಲಿ ಮುಖ್ಯ ವಾಹಿನಿಗೆ ಕರೆತರಲು ಅಗತ್ಯವಾಗಿರುವ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಆದರೂ ಪರಿಶಿಷ್ಟ ಜಾತಿಯ ಜನರಿಗೆ ಯಾವ ಮೂಲ ಸೌಕರ್ಯಗಳೂ ಲಭಿಸಿಲ್ಲದೆ ಇರುವುದು ಶೋಚನೀಯ. ಶಿಕ್ಷಣ, ಉದ್ಯೋಗ ಮುಂತಾದ ವಿವಿಧ ರಂಗಗಳಲ್ಲಿ ಮೀಸಲಾತಿ ನೀಡುವ ಧೋರಣೆ ಅನುಷ್ಠಾನಕ್ಕೆ ಬಂದಿದೆ. ಆದರೂ ಇವರ ಸ್ಥಿತಿಗತಿಗಳಲ್ಲಿ ತೃಪ್ತಿಕರ ಸುಧಾರಣೆ ಹಾಗೂ ಅಭಿವೃದ್ಧಿಗಳು ಆಗಿಲ್ಲವೆಂದೆ ಸಂಶೋಧನೆಯ ತಳಹದಿಯ ಮೇಲೆ ಹೇಳಬಹುದಾಗಿದೆ.. ಪರಿಶಿಷ್ಟ ಜಾತಿಯ ಜನರ ಜೀವನದ ಸ್ಥಿತಿಗತಿಗಳನ್ನು ವಿಶ್ಲೇಷಿಸಲು, ಇವರ ಭೌಗೋಳಕ ಜನವಿವರಣೆ, ಶೈಕ್ಷಣಿಕ ಅಂತಸ್ತು ಔದ್ಯೋಗಿಕ ಮಾದರಿ, ಜೀವನದ ಗುಣಮಟ್ಟ, ಜೀವನ ವಿಧಾನ ಮುಂತಾದವುಗಳ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 21% ರಷ್ಟು ಪರಿಶಿಷ್ಟ ಜಾತಿಯ ಜನರಿದ್ದಾರೆ. ಇದನ್ನು ಭಾರತೀಯ ಸಮಾಜದಲ್ಲಿ ಅಧಿಕಸಂಖ್ಯಾತರಿಂದ ಕೂಡಿದ ಒಂದು ಸಾಮಾಜಿಕ ಗುಂಪೆಂದು ಪರಿಗಣಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಇವರ ಸಂಖ್ಯೆ ಅಧಿಕವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಯ ಜನರಿರುವ ಪ್ರಮುಖ ಜಿಲ್ಲೆಗಳಲ್ಲಿ ಹಾಸನ ಜಿಲ್ಲೆಯೂ ಒಂದಾಗಿದೆ ಅದರಲ್ಲಿ ಪರಿಶಿಷ್ಟ ಜಾತಿಗಳ ಮಹಿಳೇಯರ ಶಿಕ್ಷಣದ ಮಟ್ಟ, ಕ್ರೀಡೆ ಸಬಲೀಕರಣದ ಹಾದಿಯನ್ನು ಗುತಿಸಬಹುದಾಗಿದೆ. ಅಸಮಾನತೆಗಳ ಕಾರಣಗಳ ಗೌಪ್ಯತೆಯನ್ನು ವ್ಯವಸ್ಥೆಗಳನ್ನು ಆಡಳತ ಸರ್ಕಾರಗಳು ಬಹಳ ಮುತುವರ್ಜಿಯಿಂದ ಹೋಗಾಲಾಡಿಸಬೇಕೆಂದು ಕರೆಸಿಕೊಳ್ಳುವ ಅಸ್ಪೃಶ್ಯರು, ಪರಿಶಿಷ್ಟರು, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಮಾನತೆ ಘನತೆ ಮತ್ತು ಗೌರವಗಳನ್ನು ಅಭಿವೃದ್ಧಿ ಕಾರ್ಯಕೈಗೊಳ್ಳಬೇಕು.

ಶೈಕ್ಷಣಿವಾಗಿ, ಮುಂದಿನ 5 ವರ್ಷಗಳಲ್ಲಿ ಭಾರತ ಸಂಪೂರ್ಣ ಸಾಕ್ಷರ ರಾಷ್ಟ್ರವಾಗಲಿದೆ ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ ವ್ಯಕ್ತಪಡಿಸಿದೆ. 6 ರಿಂದ 12 ವರ್ಷ ಮಕ್ಕಳಂದಲೇ ಅಕ್ಷರ ಕಲಿಸುವ ಪರಿಕಲ್ಪನೆ ಮೂಡಿದೆ ಎಂದು ಪ್ರನಾಳಕೆಯಲ್ಲಿ ಹೇಳದ್ದಾರೆ. 1947ರಲ್ಲಿ ಸ್ವಾತಂತ್ರ್ಯ ಬಂದಾಗ

ಶೇ.18% ರಷ್ಟಿದ್ದ ಸಾಕ್ಷರತೆ ಶೇ.80% ರಷ್ಟಿದೆ ಎಂದು ಶಿಕ್ಷಣ ಹಬ್ಬ ಕಾರ್ಯಕ್ರಮದಲ್ಲಿ ಹೇಳಿದ್ದಾರೆ" ಈ ಹೇಳಿಕೆ ಬಹಳ ಸಮಂಜವಾಗಿದ್ದರೂ, ಅದನ್ನು ತುರ್ತಾಗಿ ಜಾರಿಗೆ ತರುವ ಸಂದರ್ಭ ಬಹಳ ಹಿಂದೆಯೇ ಆಗಬೇಕಿತ್ತು. ಕೇಂದ್ರ ಸರ್ಕಾರ ಜಾರಿಗೆ ತಂದ ಕೆಲವು ಡಿಜಿಟಲ್ ಕಾರ್ಯಕ್ರಮಗಳ ವಿಸ್ತರಣೆ ಆಗಬೇಕಿತ್ತು. ಏಕೆಂದರೆ ಶಿಕ್ಷಣದ ಅರಿವು ಎಲ್ಲರಿಗೂ ಇದ್ದಲ್ಲಿ ಬ್ಯಾಂಕ್ ವ್ಯವಹಾರ, ಶಿಕ್ಷಣ ನೀತಿ, ನಿಯಮ ದೇಶದ ಅಭಿವೃದ್ಧಿ ಕಾರ್ಯಕ್ರಮಗಳ ಜಾರಿಗೆಯ ಪರಿಣಾಮ ಮತ್ತು ದುಷ್ಪರಿಣಾಮಗಳ ಉಪಯೋಗ ತಿಳಿಯುತ್ತಿತ್ತು. ಅದನ್ನು ಬಳಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದರು. ಆದರೂ ಈ ದೇಶ ಸಂಪೂರ್ಣ ಸಾಕ್ಷರತಾ ರಾಷ್ಟ್ರವಾಗುವಲ್ಲಿ ಹೆಚ್ಚು ಗಮನಹರಿಸಬೇಕಾಗಿದೆ.

ಸಂಪೂರ್ಣ ಸಾಕ್ಷರತಾ ರಾಷ್ಟ್ರವಾದರೇ ಭಾರತ ದೇಶದಲ್ಲಿ ಜಾತಿರಹಿತ ಸಮಾಜ ಉದಯವಾಗಲು ಸಾಧ್ಯವೇ? ಎಂಬುದು ಪ್ರಶ್ನಾರ್ಹವಾದುದು ದಲಿತರಿಗೆ ಅಥವಾ ತುಳಿತಕ್ಕೊಳಪಟ್ಟವರಿಗೆ ಸಾಮಾಜಿಕ ಸ್ಥಾನಮಾನ ದಕ್ಕುವುದೇ? ಎಂಬುದು ನಿರೀಕ್ಷಿತವಾದುದು. ದಲಿತರು ಅಥವಾ ಅಸ್ಪೃಶ್ಯರಿಗೆ ಶಿಕ್ಷಣ, ಉನ್ನತ ಹುದ್ದೇ ಪದವಿಗಳು ದೊರೆತಾಗ ಮಾತ್ರ ಪರಿಶಿಷ್ಟ ಜಾತಿಗಳ ಅಭ್ಯುದ್ಯಯ ಸಾಧ್ಯ ಎಂಬುದು ಕೆಲವರ ಅಭಿಪ್ರಾಯ. ಈ ಅಭಿಪ್ರಾಯವನ್ನು ಒಪ್ಪುವುದಾದರೆ ದೇಶದಲ್ಲಿ ದಲಿತ ರಾಜಕೀಯದ್ದಾರೆ, ಗಾಯಕರಿದ್ದಾರೆ, ಹೋರಾಟಗಾರರಿದ್ದಾರೆ ಶಿಕ್ಷಣ ತಜ್ಞರಿದ್ದಾರೆ. ನ್ಯಾಯಧೀಶರುಗಳಿದ್ದಾರೆ ಆದರೂ ಭಾರತದಲ್ಲಿ ದಲಿತರು ಸ್ಥಿತಿ/ಅಸ್ಪೃಶ್ಯರ ಸ್ಥಿತಿ ಏಕೆ ಸುಧಾರಿಸಿಲ್ಲ. ಸುಧಾರಿಸುತ್ತಿಲ್ಲ ಎಂಬುದು ಸಮಜೊ- ಸಾಂಸ್ಕೃತಿಕ ಪ್ರಶ್ನೇಯಾಗಿದೆ.

ಇದು ದೇಶ್ ದಲಿತರ ಅಥವಾ ಪರಿಶಿಷ್ಟ ಜಾತಿಗಳ ಪರಿಸ್ಥಿತಿಯ ಒಂದು ನೋಟವಾದರೆ; ಹಾಸನ ಜಿಲ್ಲೆಯ ಪರಿಶಿಷ್ಟ ಜಾತಿಗಳ ಮಹಿಳೆಯರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಬಲೀಕರನ ಮತ್ತು ಸ್ಥಿತಿ ಗತಿಗಳ ವಿಶ್ಲೇಷಣೆಯನ್ನು ತಿಳಿಯುವುದಾಗಿದೆ. ಪರಿಶಿಷ್ಟ ಜಾತಿಯ ಮಹಿಳೆ ವೇದಗಳ ಕಾಲದಿಂದಲೂ, ಮನು ಹೇಳಿದಂತೆ "ಶೂದ್ರಾತಿಶೂದ್ರ – ಮಹಿಳೆಯರಿಗೆ ವಿದ್ಯೆ ಎನ್ನುವುದು ಕನಸಿನಲ್ಲೂ ಮೂಡಲಾಗದ ಅಸ್ಪೃಷ್ಟ ಕಲ್ಪನೆಯಾಗಿರಬೇಕು" ಎಂದು ಹೇಳಿದ್ದಾರೆ. ಭಾರತದ ನಾಗರಿಕತೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ ದಮನಿತರ ಮಹಿಳೆಯರ ಧ್ವನಿಗೆ ಸುಮಾರು ನೂರು ವರ್ಷಗಳ ಇತಿಹಾಸವಿರುವುದನ್ನು ಕಾಣಬಹುದು. ಆದರೆ ಜಾತಿ ಪ್ರತ್ಯೇಕತೆಯ ಪರಿಕಲ್ಪನೆಯೊಂದಿಗೆ ಪರಿಶಿಷ್ಟ ಜಾತಿ ಮಹಿಳೆಯರ ಶೈಕ್ಷಣಿಕ ಸ್ಥಿತಿಯನ್ನು ತಿಳಿಯಲು ಸಂಶೋಧನೆಯಲ್ಲಿ ಪ್ರಯತ್ನಿಸಲಾಗಿದೆ.

ಬಹುಸಂಖ್ಯಾತ ಪರಿಶಿಷ್ಟ ಜಾತಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿರುವುದು ಕಂಡು ಬರುತ್ತದೆ. ಇದು ಈ ಜನಾಂಗದ ಮಹಿಳೆಯರ ಮತ್ತೊಂದು ಬಿಕ್ಕಟ್ಟು, "2000ರಲ್ಲಿ ಗ್ರಾಮೀಣ ಭಾಗದ ಪರಿಶಿಷ್ಟ ಜಾತಿಗಳ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ.24%ರ ಪ್ರಮಾಣದಲ್ಲಿತು, ಸವರ್ಣಿಯ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇ.41% ರಷ್ಟಿತ್ತು. ಶೇಕಡಾ 29%ರಷ್ಟಿತ್ತು ಸಾಮಾನ್ಯವಾಗಿ ನಗರ ಮತ್ತು ಪಟ್ಟಣಗಳಲ್ಲಿ ಸಹ ಈ ಅಸಮಾನತೆ ಕಂಡುಬರುತ್ತದೆ. "ಇಲ್ಲಿ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇಕಡ 48% ರಷ್ಟಿದ್ದರೆ, ಸವರ್ಣೀಯ ಮಹಿಳೆಯರ ಸಾಕ್ಷರತ ಪ್ರಮಾಣ ಶೇ.70% ರಷ್ಟಿದೆ. ರಾಷ್ಟ್ರೀಯ ಸರಾಸರಿ ಶೇಕಡಾ 57% ರಷ್ಟಿದೆ.

ವಿದ್ಯಾಭ್ಯಾಸವನ್ನು ಮಧ್ಯದಲ್ಲೆ ಮೊಟಕುಗೊಳಿಸಿರುವುದು ಪರಿಶಿಷ್ಟ ಜಾತಿ ಮತ್ತು ಪಂಗಡದ ಮಹಿಳೆಯರು ಹೆಚ್ಚು ಎಂಬ ಸಮೀಕ್ಷೆಗಳು ಹೊರಬಿದ್ದಿದೆ. ಆದರೆ ಅಧ್ಯಯನದ ಮಿತಿಯಿಂದಾಗಿ ಪರಿಶಿಷ್ಟ ಜಾತಿ ಮಹಿಳೆಯರ ಪ್ರಮಾಣವನ್ನು ಕೇಂದ್ರಿಕರಿಸಲಾಗಿದೆ. ಈ ಸಮೀಕ್ಷೇ ಮಹಿಳೆಯರ ಹಿನ್ನಡೆಗೆ ಹಿಂಜರಿತವಾಗಿದೆ. ಶಿಕ್ಷಣದ ಮಟ್ಟದಲ್ಲಿ ಮೇಲೇರುತ್ತ ಹೋದಂತೆ ವಿದ್ಯಾಭ್ಯಾಸದಿಂದ ಕಡಿತಗೊಳ್ಳುವ ಪ್ರಮಾಣವು ಹೆಚ್ಚಾಗುತ್ತದೆ. "ಗ್ರಾಮೀಣ ಭಾಗದ ಪರಿಶಿಷ್ಟ ಜಾತಿಗಳ ಮಹಿಳೆಯರ ಪದವೀಧರರ ಪಾಲು ಶೇಕಡಾ 0.4% ಪ್ರಮಾಣದಲ್ಲಿದ್ದರೆ, ಸವರ್ಣೀಯರ ಮಹಿಳೆಯರ ಪಾಲು ಶೇಕಡ 1.2%ರ ಪ್ರಮಾಣದಲ್ಲಿದೆ. ರಾಷ್ಟ್ರೀಯ ಸರಾಸರಿಯ ಪ್ರಮಾಣ ಶೇಕಡಾ 0.63% ಪ್ರಮಾಣದಲ್ಲಿದೆ. ನಗರ ಮತ್ತು ಪಟ್ಟಣ ಭಾಗದ ಪರಿಶಿಷ್ಟ ಜಾತಿಗಳ ಮಹಿಳೆಯರ ಪಾಲು ಶೇಕಡಾ 2.7% ಹಾಗೂ ಸವರ್ಣೀಯ ಮಹಿಳೆಯರ ಪಾಲು ಶೇಕಡಾ 10.1% ಮತ್ತು ರಾಷ್ಟ್ರೀಯ ಸರಾಸರಿ 11.12% ಪ್ರಮಾಣದಲ್ಲಿದೆ.

ಶೈಕ್ಷಣಿಕವಾಗಿ ಹಾಸನ ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ನೀಡಲಾಗಿದ್ದು ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಕ್ಷೇತ್ರಗಳಿಗೆ ಪ್ರಾತಿನಿಧ್ಯ ನೀಡಲಾಗಿದೆ. ಜಿಲ್ಲೆಯಲ್ಲಿ ಸರ್ಕಾರಿ ಶಿಕ್ಷಣದ ಜೊತೆಗೆ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳು ಸೇರಿ ಶಿಕ್ಷಣಕ್ಕೆ ಕೊಡುಗೆಯನ್ನು ನೀಡುತ್ತಿವೆ. ಹಾಗಾಗಿ ಹಾಸನ ಜಿಲ್ಲೆಯ ಶಾಲಾ ಕಾಲೇಜುಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆಯನ್ನು ಈ ಕೆಳಗಿನ ಪಟ್ಟಿಯಂತೆ ತಿಳಿಸಲಾಗಿದೆ.

**ಕೋಷ್ಟಕ–1.1**

| ವರ್ಷ | ಪ್ರೌಢಶಾಲೆಗಳು | ದಾಖಲಾತಿಯಾಗಿರುವ ಹುಡುಗರ ಸಂಖ್ಯೆ | ದಾಖಲಾತಿಯಾಗಿರುವ ಹುಡುಗಿಯರ ಸಂಖ್ಯೆ | ಒಟ್ಟು |
|---|---|---|---|---|
| 2010–11 | 488 | 39128 | 41518 | 80646 |
| 2011–12 | 538 | 97090 | 37250 | 74340 |
| 2012–13 | 535 | 25805 | 26048 | 51853 |
| 2016–17 | 535 | 10038 | 10.557 | 20595 |
| | 534 | 22545 | 22458 | 45003 |

**ಆಧಾರ :ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳು ಕಛೇರಿ ಹಾಸನ ಜಿಲ್ಲೆ ಹಾಸನ ಪುಟ ಸಂಖ್ಯೆ–59**

ಮೇಲಿನ ಕೋಷ್ಟಕವನ್ನು ಗಮನಿಸಿದಾಗ 2010–11ರ ಸಾಲಿನಲ್ಲಿ ಹಾಸನ ಜಿಲ್ಲೆಯಾದ್ಯಂತ 488 ಪ್ರೌಢ ಶಾಲೆಗಳಿದ್ದು 39128 ಬಾಲಕರು, 41518 ಬಾಲಕಿಯರು, ದಾಖಲಾಗಿರುತ್ತಾರೆ. 2011–12ರ ಸಾಲಿನಲ್ಲಿ ಪ್ರೌಢಶಾಲೆಗಳ ಸಂಖ್ಯೆ 538 ಏರಿರುತ್ತದೆ. 97090 ಹುಡುಗರು 37250 ಹುಡುಗಿಯರು ದಾಖಲಾಗಿರುತ್ತಾರೆ. 2012–13ರ ಸಾಲಿನಲ್ಲಿ 535 ಪ್ರೌಢ ಶಾಲೆಗಳಿದ್ದು 3 ಶಾಲೆಗಳು ಇಳಿಕೆಯಾಗಿರುತ್ತದೆ. 25805 ಹುಡುಗರು ಮತ್ತು 26048 ಬಾಲಕಿಯರು ಲೆಕಿಸುವಾಗ. ಅದರಂತೆಕ್ರಮವಾಗಿ 2016 ಮತ್ತು 17 ಮತ್ತು 18ರ ಸಾಲಿನಲ್ಲಿ 535 ಮತ್ತು 534 ಪ್ರೌಢಶಾಲೆಗಳು ನೋಂದಾವಣಿಯಾಗಿದ್ದು ಮತ್ತು 10557 ಮತ್ತು 22458 ಬಾಲಕಿಯರ ಸಂಖ್ಯೆ ಕಂಡು ಬಂದಿರುತ್ತದೆ. ಒಟ್ಟಾರೆ ಕೋಷ್ಟಕವನ್ನು ಅವಲೋಕಿಸಿದಾಗ ಪ್ರಸ್ತುತ 22458 ಬಾಲಕಿಯರು ಇರುವುದು ಕಂಡು ಬಂದಿದೆ.

**ಕೋಷ್ಟಕ 1.2:** ತಾಲೂಕು ಹಾಸನ ಜಿಲ್ಲೆಯಲ್ಲಿರುವ ಪ್ರೌಢ ಶಾಲೆಗಳ ಪಟ್ಟಿ

| ಕ್ರಮ ಸಂಖ್ಯೆ | ತಾಲ್ಲೂಕು | ಪ್ರೌಢ ಶಾಲೆಗಳು | ಹುಡುಗರ ದಾಖಲಾತಿ | ಹುಡುಗಿರ ದಾಖಲಾತಿ |
|---|---|---|---|---|
| 1 | ಆಲೂರು | 33 | 1329 | 2725 |
| 2 | ಅರಕಲಗೂಡು | 56 | 2886 | 5646 |
| 3 | ಅರಸೀಕೆರೆ | 87 | 4146 | 8290 |
| 4 | ಬೇಲೂರು | 55 | 2714 | 5342 |
| 5 | ಚನ್ನರಾಯಪಟ್ಟಣ | 82 | 4066 | 7996 |
| 6 | ಹಾಸನ | 118 | 6200 | 12347 |
| 7 | ಹೊಳೆನರಸೀಪುರ | 62 | 3019 | 6115 |
| 8 | ಸಕಲೇಶಪುರ | 43 | 1688 | 3392 |
| | ಒಟ್ಟು | 535 | 26048 | 51853 |

**ಆಧಾರ: ಉಪನಿರ್ದೇಶಕರ ಕಛೇರಿ. ಹಾಸನ ಜಿಲ್ಲೆ, ಹಾಸನ (2016–17ರ ಅಂತ್ಯದವರೆಗೆ)**

ಮಾನವನ ಅಭಿವೃದ್ಧಿಗೆ ವಿಕಾಸಕ್ಕೆ ಇತರೇ ಮೂಲವಸ್ತುಗಳು ಹೇಗೆ ಮುಖ್ಯವೋ ಹಾಗೆ ಬೌದ್ಧಿಕ ಬೆಳವಣಿಗೆಗೆ ಶಿಕ್ಷಣವು ಅತ್ಯಾವಶ್ಯಕ ಶಿಕ್ಷಣವು ಮನುಷ್ಯನ ಒಟ್ಟಾರೆ ಜೀವನದ ಕೌಶಲ್ಯಗಳನ್ನು ಬದಲಾಯಿಸುವ ಲಕ್ಷಣವನ್ನು ಹೊಂದಿದೆ. ಹಾಗಾಗಿ ಅಧ್ಯಯಬದ ದೃಷ್ಟಿಯಿಂದ ಹಾಸನ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಗಳ ಜಿವನದ ಸ್ಥಿತಿ–ಗತಿಗಳನ್ನು ಗುರುತಿಸಬೇಕಾರುವುದರಿಂದ ಶಿಕ್ಷಣದ ಸಬಲೀಕರಣವನ್ನು ಈ ಕೆಳಗಿನಂತೆ ತಿಳಿದುಕೊಳ್ಳಬಹುದಾಗಿದೆ. ಶಿಕ್ಷಣವು ಜಾತ್ಯತೀತವಾಗಿ, ಧರ್ಮತೀತವಾಗಿ ಲಭಿಸಬೇಕೆಂಬುದು ಅಕ್ಷರದ ಮೂಲ ಮಂತ್ರವಾಗಿದೆ.

| ಕ್ರಮ ಸಂಖ್ಯೆ | ಪರೀಕ್ಷೆಗೆ ಹಾಜರಾಜದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ | ಪಾಸಾದವರ ಸಂಖ್ಯೆ | ಪಾಸಾದವರ ಪ್ರತಿಶತ | ಪುರುಷ ಮಹಿಳೆ |
|---|---|---|---|---|
| 1 | 8.41.666 | 6.8336 | 75.7% | 68.96 79.59 |

ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶದಲ್ಲಿ ಹಾಸನ ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಸ್ಥಾನ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸಾಮಾನ್ಯವಾಗಿ ರಾಜಕೀಯದಲ್ಲಷ್ಟೇ ಸುದ್ದಿ ಮಾಡುತ್ತಿದ್ದ ಜಿಲ್ಲೆ ಶೈಕ್ಷಣಿಕವಾಗಿಯೂ ತನ್ನ ಸಾಧನೆಯನ್ನು ಪ್ರತಿಬಿಂಬಿಸಿದೆ. ಕಳೆದ ಸಾಲಿನಲ್ಲಿ 7ನೇ ಸ್ಥಾನದಲ್ಲಿದ್ದ ಜಿಲ್ಲೆ ಈ ಭಾರಿ ಶೇಕಡ 89.33 ಫಲಿತಾಂಶ ಪಡೆಯುವ ಮೂಲಕ 1ನೇ ಸ್ಥಾನ ಪಡೆದುಕೊಂಡು ಜಿಲ್ಲೆಯ ವಿದ್ಯಾರ್ಥಿಗಳು ಕೀರ್ತಿಗೆ ಪಾತ್ರರಾಗಿದ್ದಾರೆ.

**ಕೋಷ್ಟಕ–1.3**

| ಕ್ರ.ಸಂ | ಜಾತಿವಾರು | ಪ್ರತಿಕ್ರಿಯೆ ಮಾದರಿ | | ಒಟ್ಟು | ಶೇಕಡ | |
|---|---|---|---|---|---|---|
| | | ಹೌದು | ಇಲ್ಲ | | | |
| 1 | ಪರಿಶಿಷ್ಟ ಜಾತಿಗಳು | 5 | 1 | 6 | 11.76 | 5.88 |
| 2 | ಪರಿಶಿಷ್ಟ ಪಂಗಡ | – | 1 | 1 | 0 | 2.94 |
| 3 | ಅಲ್ಪಸಂಖ್ಯೆತರು | – | 1 | 1 | 0 | 2.94 |
| 4 | ಹಿಂದುಳಿದ ವರ್ಗ | – | 14 | 14 | – | 41.1 |
| 5 | ಸಾಮಾನ್ಯ ವರ್ಗ | – | 12 | 12 | – | 35.29 |
| | ಒಟ್ಟು | 5 | 29 | | 11.76 | 88.22 |

ಆಧಾರ : ಕ್ಷೇತ್ರಾಧ್ಯಯನದ ಮಾಹಿತಿ–(2018ರೂ ಡಿಸೆಂಬರ್ ಅಂತ್ಯದವರೆಗೆ ಮಾತ್ರ)




ಮೇಲ್ಕಂಡ ಕೋಷ್ಟಕವನ್ನು ಗಮನಿಸಿದಾಗ, ಜಾತಿ ಕಾರಣಕ್ಕಾಗಿ ಅಥವಾ ಧರ್ಮದ ಕಾರಣಕ್ಕಾಗಿ ಶೋಷಣೆಯನ್ನು ಅನುಭವಿಸಿದ್ದಾರೆಯೇ ಎಂಬ ಪ್ರಶ್ನೆಗೆ ಪರಿಶಿಷ್ಠ ಜಾತಿಗಳ ಜನರು ಹೌದು ಎಂದು 5 ಜನ ಇಲ್ಲ ಎಂದು ಒಬ್ಬರು ಪ್ರತಿಕ್ರತಿಸಿದರು ಅದೇ ರೀತಿ ಇತರೇ ವರ್ಗದವರನ್ನು ಪ್ರಶ್ನಿಸಿದಾಗ, ಇಲ್ಲ ಎಂಬುದು ಗರಿಷ್ಠವಾಗಿ ತಿಳಿದು ಬಂದಿತು. ಅಂದರೆ ಶೈಕ್ಷಣಿಕ ವಲಯದಲ್ಲಿಯೂ ಸಹ ಶಿಕ್ಷಿತರು ಜಾತಿಯ ಶೋಷಣೆಯನ್ನು ಅನುಭವಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಇದಿಷ್ಟು ಆಲೂರು ತಾಲೂಕಿನ ಶಾಲೆಯ ಶೈಕ್ಷಣಿಕ ಸಬಲೀಕರಣ ಸ್ಥೂಲನೋಟವಾಗಿರುತ್ತದೆ.

**ಕೋಷ್ಟಕ–1.4:** ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ಒಟ್ಟುಶೈಕ್ಷಣಿಕ ಸಂಸ್ಥೆಗಳ ವಿವರ:–

| ಕ್ರ. ಸಂ | ಶಾಲೆಗಳು/ಕಾಲೇಜು | ಶಾಲೆಗಳು |
|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು | 8 |
| 2 | ಕಿತ್ತೂರು ಚೆನ್ನಮ್ಮ ವಸತಿಶಾಲೆಗಳು | 6 |
| 3 | ಡಾ.ಬಿ.ಆರ್.ಅಂಬೇಡ್ಕರ್‌ವಸತಿ ಶಾಲೆಗಳು | 7 |
| 4 | ಇಂದಿರಾ ಗಾಂಧಿ ವಸತಿ ಶಾಲೆಗಳು | 4 |
| 5 | ಮೋರಾರ್ಜಿದೇಸಾಯಿ ವಸತಿ ಕಾಲೇಜು | 2 |
| 6 | ವಸತಿ ಶಾಲೆ /ಆಶ್ರಮ ಶಾಲೆ | 4 |
| | ಒಟ್ಟು | 31 |

**ಆಧಾರ** :– ಕ್ಷೇತ್ರಾಧ್ಯಯನ ಮಾಹಿತಿ 2019ರ ಫೆಬ್ರವರಿ ಅಂತ್ಯದವರೆಗೆ




ಇದು ಗ್ರಾಮೀಣ ಜನರ ಬದುಕಿನ ಭಾಗವಾಗಿದೆ, ಹಾಗೇ ನಗರ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಗಳ ಮಹಿಳೆಯ ಬದುಕಿನ ಚಿತ್ರಣವನ್ನು ಅವಲೋಕಿಸುತ್ತಾ ಹೋದಂತೆ ಅವರ ಸಬಲೀಕರಣದ ಕವಲುಗಳಾದ ಆರ್ಥಿಕತೆ ಶಿಕ್ಷಣದ ಮಟ್ಟ ರಾಜಕೀಯ ಹಾದಿ ಎಲ್ಲವೂ ಸಹ ಸುಧಾರಿಸಿದ ಹುದ್ದೆಗಳಲ್ಲಿರುವ ಉನ್ನತ ಶಿಕ್ಷಣ ಪಡೆದಿರುವ ಮಹಿಳೆಯರ ಸಂಖ್ಯೆ ಕಡಿಮೆ ಇದ್ದು ಇವರ ಆರ್ಥಿಕ ಸ್ವಾತಂತ್ರ್ಯದ ಬಲದಿಂದ ಸಂಪ್ರದಾಯವನ್ನು ಕಳಚಲು ಸಾಧ್ಯವಾಗಿದೆಯೇ? ಎಂಬ ಪ್ರಶ್ನೆಗೆ 120 ಮಹಿಳೆಯರನ್ನು ಒಳಪಡಿಲಾತು. ಅದರಲ್ಲಿ ಇತರೆ ವರ್ಗದ ಮಹಿಳೆಯರು ಹಾಗೂ ಪರಿಶಿಷ್ಟ ಜಾತಿಗಳ ಮಹಿಳೆಯರನ್ನು ಪ್ರಶ್ನಿಸಲಾಯಿತು ಅವರಿಂದ ಪಡೆದ ಪ್ರತಿಕ್ರಿಯೆಗಳನ್ನು ಈ ಕೆಳಗಿನಂತೆ ಪಟ್ಟಿಯನ್ನು ಸೂಚಿಸಲಾಗಿದೆ.

ಒಟ್ಟಾರೆ ಶಿಕ್ಷಣ ಎಂಬುದು ಪ್ರಗತಿಯ ದಾರಿ. ಹಾಗಾಗಿ ಅದರ ಪ್ರತಿಫಲ ಪಡೆಯುವುದರಲ್ಲಿ ಮಹಿಳೆ ಎಷ್ಟರ ಮಟ್ಟಿಗೆ ಯಶಸ್ವಯಾಗಿದ್ದಾಳೆ ಎಂಬುದನ್ನು ಕೆಲವು ಅಂಶಗಳಿಂದ ಪಟ್ಟಿ ಮಾಡಲಾಗಿದೆ. ಇದುವರೆಗೂ ತಿಳಿದುಕೊಂಡಂತೆ, ಶಿಕ್ಷಣ ಎಂಬುದು ಔಪಚಾರಿಕ ಮತ್ತು ಅನೌಪಚಾರಿಕವಾದುದು. ಅದು ಸಮಾಜದಲ್ಲಿ ಯಾವ–ಯಾವ ಕ್ಷೇತ್ರಗಳಲ್ಲಿ ಹೇಗೆ ದೊರೆಯುತ್ತದೆ ಎಂಬುದು ಬಹು ಮುಖ್ಯವಾದುದು. ವಿದ್ಯೆಗಿಂತ ಶಿಕ್ಷಣ ಎಂಬುದು ಬಹಳ ವಿಸ್ತಾರವಾದುದು ಹಾಗೂ ಸಬಲೀಕರಣಕ್ಕೆ ಮೂಲ ಬುನಾದಿ ಎಂದೇ ಗುರ್ತಿಸಬಹುದಾಗಿದೆ.

ಹಾಗಾಗಿ ಪರಿಶಿಷ್ಟ ಜಾತಿಗಳ ಮಹಿಳೆ ಈ ಸಮಾಜದಲ್ಲಿ ಗೌರವಯುತವಾಗಿ ನೆಲೆನಿಲ್ಲಲು ಯಾವ–ಯಾವ ರೀತಿಯ ಶಿಕ್ಷಣ ಉಪಯೋಗಕ್ಕೆ ಬರುತ್ತದೆ ಎಂಬುದು ಬಹು ಮುಖ್ಯವಾದದು. ಕತ್ತಲೆಯಿಂದ ಬೆಳಕಿ ನಡೆಗೆ ಕೊಂಡ್ಯೋಯ್ಯವುದೇ ಶಿಕ್ಷಣ. ಅದು ಯಾವುದೇ ರೀತಿಯದಾಗಿರಬಹುದು. ಜ್ಞಾನವಂತರೊಡನೆ ಕುಳತು ಚರ್ಚಿಸಿ ಜ್ಞಾನ ಪಡೆಯುವುದು ಶಿಕ್ಷಣವಾಗಬಹುದು. ಅದು ಯಾವುದೇ ವೇದಿಕೆಯಾಗಿರಬಹುದು ಅಥವಾ ಸ್ಥಳ ವ್ಯಕ್ತಿಯಾಗಿರಬಹುದು.ಆ ನಿಟ್ಟಿನಲ್ಲಿ ಪರಿಶಿಷ್ಟ ಜಾತಿಗಳ ಮಹಿಳೆಯರ ಸಬಲೀಕರಣದ ಹಾದಿಯನ್ನು ಶೈಕ್ಷಣಿಕ ಧಾರ್ಮಿಕ ಆರ್ಥಿಕ ರಾಜಕೀಯ ಮತ್ತು ಸಾಮಾಜಿಕವಾಗಿ ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅವರ ಶಿಕ್ಷಣ ಮಟ್ಟವನ್ನು ಕಲೆಹಾಕಲಾಗಿದೆ. ಕೇವಲ ಶಾಲೆಯಲ್ಲಿ ಕರಗತವಾಗುವ ಜ್ಞಾನ ಶೈಕ್ಷಣಿಕ ಜ್ಞಾನವಾಗುವುದಿಲ್ಲ ಸಮಾಜದ ಎಲ್ಲಾ ರಂಗಗಳಲ್ಲಿಯೂ ಕಲಿಕೆಯಾಗುವುದು ಶಿಕ್ಷಣವಾಗುತ್ತದೆ. ಹಾಗಾಗಿಯೇ ಮಾನವನನ್ನು ಸಂಘಜೀವಿ ಎಂದು ಕರೆಯಲಾಗುತ್ತದೆ.

ಪರಿಶಿಷ್ಟ ಜಾತಿಗಳ ಯಶಸ್ಸು ಮತ್ತು ಸಾಮರ್ಥ್ಯಗಳಿಗೆ ದುಡಿಮೆ ಮತ್ತು ಬುದ್ಧಿಶಕ್ತಿಗಳೇ ಕಾರಣವಾಗಬೇಕು. ಹಾಗಾಗಿ ವಿವಿಧ ಕ್ಷೇತ್ರಗಳಲ್ಲಿನ ಅವರ ದುಡಿಮೆ, ಬುದ್ಧಿಶಕ್ತಿಗಳು ಮೂಲವಾಗಿರುವ

ಸಬಲೀಕರಣವನ್ನು ಅರಿಯುವಲ್ಲಿ ಈ ಪರ್ಯಾಯ ಪ್ರಮುಖವಾಗುತ್ತದೆ. ಹಾಸನ ಜಿಲ್ಲೆಯ ಸುತ್ತಮುತ್ತಲಿನ ಗ್ರಾಮ ಹಾಗೂ ನಗರ ಪ್ರದೇಶಗಳು ಅಧ್ಯಯನಕ್ಕೆ ಪೂರಕವಾಗಿದ್ದು ತಾಲೂಕುಗಳಾದಂತಹ ಅರಕಲಗೂಡು ಅರಸೀಕೆರೆ ಆಲೂರು, ಬೇಲೂರು, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ಹಾಗೂ ಸಕಲೇಶಪುರಗಳನ್ನು ಯಾದೃಚ್ಚಿಕವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. 8 ತಾಲೂಕುಗಳಿಂದ 200 ಜನರನ್ನು ಆಯ್ಕೆ ಮಾಡಿಕ್ಕೊಂಡು ಪ್ರಶ್ನಾವಳಿಯಿಂದ ನೇರವಾಗಿ ಸಂದರ್ಶಿಸಲಾಗಿದೆ. ಪರಿಶಿಷ್ಟ ಜಾತಿಗಳ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಅವರ ಸ್ಥಾನಮಾನದ ಪ್ರಗತಿ ಮತ್ತು ಬದಲಾವಣೆಯ ಅಂತಸ್ತು ಸರ್ಕಾರದಿಂದ ಅನುಷ್ಠಾನಗೊಂಡಿರುವ ವಿವಿಧ ಯೋಜನೆಗಳು ಕಾರ್ಯಕ್ರಮಗಳು ಮತ್ತು ಸೌಲಭ್ಯಗಳು ಎಷ್ಟರ ಮಟ್ಟಿಗೆ ಪ್ರಭಾವ ಬೀರಿವೆ ಎಂಬುದನ್ನು ಅಂಕಿ ಅಂಶಗಳಿಂದ ಪತ್ತೆ ಹಚ್ಚಲಾಗಿದೆ.

ಶಾಲಾ ಹೆಣ್ಣು ಮಕ್ಕಳ ಮೇಲೆ ಇತರೇ ಮೇಲ್ವರ್ಗದ ಅಸ್ಪೃಶ್ಯರು ನಡೆಸಲಾಗಿರುವ ದೌರ್ಜನ್ಯಗಳು ಶೋಷಣೆಗಳು ಅಪರಹಣ ಮತ್ತು ಅತ್ಯಾಚಾರಗಳಂತಹ ಕ್ರೂರ ಅಪರಾಧಗಳನ್ನು ಕಲೆ ಹಾಕಲಾಗಿ ಜಾತಿಯ ಹಿನ್ನೆಲೆಯನ್ನೇ ಬುನಾದಿಯನ್ನಾಗಿ ಮಾಡಿಕ್ಕೊಂಡು ಇತರೇ ವರ್ಗದವರು ಪರಿಶಿಷ್ಟ ಜಾತಿಗಳ ಮಹಿಳೆಯರ ಮೇಲೆ ಹಲ್ಲೆ ಅತ್ಯಾಚಾರದಂತಹ ಕೃತ್ಯಗಳನ್ನು ನಿರ್ಭೀತಿಯಿಂದ ಮಾಡುವ ಮೂಲಕ ಮೇಲುಗೈ ಸಾಧಿಸಿರುವುದನ್ನು ಪ್ರಥಮ ವಿಚಾರಣ ವರದಿಯಲ್ಲಿ ಕಾಣಬಹದು. ಆಸ್ತಿಗೆ ಸಂಬಂಧಿಸಿದ ವಿಚಾರ ಕೆಲಸದ ಸಮಯದಲ್ಲಿ ಹಲ್ಲೇ ದೇವಸ್ಥಾನಗಳ ಪ್ರವೇಶ ಹೀಗೆ ವಿವಿಧ ರೀತಿಯಲ್ಲಿ ಸಬಲೀಕರಣ ಹೊಂದುತ್ತಿದ್ದಾರೆಂಬ ಅಸೂಯೇಯನ್ನು ಅಪರಾಧವೆಸಗುವ ಮೂಲಕ ತೋರಿಸುತ್ತಿರುವ ಸಂದರ್ಭಗಳು ಮತ್ತು ಸಂಗತಿಗಳು ಗುರುತರವಾಗಿ ಕಂಡು ಬಂದಿವೆ.

ಪರಿಶಿಷ್ಟ ಜಾತಿಗಳ ಮಹಿಳೆಯರು ಶಿಕ್ಷಣದ ಅಸ್ತ್ರವನ್ನು ಬಳಸಿಕ್ಕೊಂಡು ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಸಬಲೀಕರಣ ಹೊಂದಿರುವ ಹೊಂದಿತ್ತಿರುವ ಆಯಾಮಗಳನ್ನು ಗುರ್ತಿಸಲು ಪ್ರಯತ್ನಿಸಲಾಗಿದೆ.ಅಂದರೆ ಅವರ ಓದು ಬರಹ, ವಿವಾಹ, ಉದ್ಯೋಗ, ಆರ್ಥಿಕ ಸ್ಥಿತಿ, ಆಯ್ಕೆ ಸ್ವಾತಂತ್ರ್ಯ ಹೊಂದಿರುವುದನ್ನು ಅಧ್ಯಯನ ಕ್ಷೇತ್ರದಲ್ಲಿ ಗುರ್ತಿಸಲಾಗಿದೆ.

ಒಟ್ಟಾರೆಯಾಗಿ ತಿಳಿಯುವುದಾದರೆ. ಈ ಮೇಲ್ಕಂಡ ಎಲ್ಲಾಂಶಗಳನ್ನು ಅವಲೋಕಿಸಿದಾಗ ಶಿಕ್ಷಣವೆಂಬುದು ನಿಜವಾಗಿಯು ಹರಿತವಾದುದು ಅದನ್ನು ಪಡೆದಾಗಲೇ ವಿಭಿನ್ನ ದಿಕ್ಕಿನಲ್ಲಿ ಯೋಚಿಸಲು ಸಾಧ್ಯ. ಈ ಸಮುದಾಯದ ಮಹಿಳೆಯರು ವಂಚನೆಗೆ ಒಳಗಾಗಿದ್ದು ಅಕ್ಷರದ ಕೊರತೆಯಿಂದಲೇ ಎಂಬುದನ್ನು ಮರೆಯುವಂತಿಲ್ಲ. ಸ್ವಾಭಿಮಾನ ಎಂಬುದು ಈ ಮಾನದಂಡವನ್ನು ಅನುಸರಿಸುವುದಿಲ್ಲ 'ಯಶಸ್ವಿ' ಎಂಬುದು ಶಿಕ್ಷಣದ ಮಾನದಂಡವನ್ನು ಅವಲಂಭಿಸಿದೆ ಹಾಗಾಗಿ ಪರಿಶಿಷ್ಟ ಜಾತಿ ಮಹಿಳೆಯರು ಕಷ್ಟಕ್ಕೆ ಹಣೆಬರಹಕ್ಕೆ ದೇವರು ಕಾರಣ ಎಂಬ ಅರೆಪ್ರಜ್ಞಾವಸ್ಥೆಯನ್ನು ಹೋಗಲಾಡಿಸಿ ಸಂಪ್ರಾದಾಯವನ್ನು ಸುಟ್ಟುಹಾಕಿ ನಮಗೆ ಎದುರಾಗುವ ಸಮಸ್ಯೆಗಳನ್ನು ಸ್ವತಃ ನಾವೇ ಬಗೆಹರಿಸಿಕೊಳ್ಳಬೇಕು ಎಂಬ ನಿರ್ಧಾರ ತೆಗೆದುಕೊಂಡಾಗ ಮಾತ್ರ ಸಬಲೀಕರಣ ಉತ್ಕೃಷ್ಟ ಮಟ್ಟದಲ್ಲಿ ಸಾದ್ಯವಾಗುತ್ತದೆ ಎಂಬುದನ್ನು ಈ ಅಧ್ಯಯನದ ವಿಶ್ಲೇಷಯಲ್ಲಿ ತಿಳಿಸಲಾಗಿದೆ.

**ಗ್ರಂಥಋಣ**


1. ಡಾ.ಎಚ್.ಎಸ್, ಅನುಪಮ ಕ್ರಾಂತಿ ಜ್ಯೋತಿ ಸಾವಿತ್ರಿಬಾಯಿ ಫುಲೆ, ಲಡಾಯಿ ಪ್ರಕಾಶನ ಪುಟ- 20
2. ಉದಯವಾಣಿ ದಿನ ಪತ್ರಿಕೆ ದಿನಾಂಕ 6.8.17. ಪು.ಸಂ-5
3. ಜಾತಿ ಸಾಮಾಜಿಕ ಪ್ರತ್ಯೇಕತೆ ಮತ್ತು ಬಡತನ, ಪರಿಕಲ್ಪನೆ, ಮೌಲ್ಯ ಮಾಪನ ಮತ್ತು ಪ್ರಾಯೋಗಿಕ ಸಾಕ್ಷಿಗಳು, ಸುಖದೇವ್ ಥೋರಾಪ್ಸ್ ಅನುಃ ಬಿ. ಶ್ರೀ ಪಾದ, ಲಡಾಯಿ ಪ್ರಕಾಶನ,2016 ಪುಟ – 36
4. ಎಸ್.ಬಿ.ದಳವಾಯಿ.-ಸಮಾಜಶಾಸ್ತ್ರದ ದೃಷ್ಟಿಯಲ್ಲಿ ಶಿಕ್ಷಣ. ವಿದ್ಯಾನಿಧಿ ಪ್ರಕಾಶನ ಗದಗ-2010.
5. ಎಂ.ಶಿವಣ್ಣ -ಸಾಮಾಜಿಕ, ಶೈಕ್ಷಣೀಕ, ಆರ್ಥಿಕ ಜನಗಣತಿ ಮತ್ತು ಮೀಸಲಾತಿ. ಕನ್ನಡ ಸಂಸ್ಕೃತಿ ಇಲಾಖೆ, 2009
6. ಕುಲಕರ್ಣಿ.ಕೆ.ಜಿ.-ಆಧುನಿಕ ಶಿಕ್ಷಣದಲ್ಲಿ ಮನೋವಿಜ್ಞಾನ, ಪ್ರದೀಪಪ್ರಕಾಶನ, 2003
7. ಚಂದ್ರಶೇಖರಯ್ಯ.ಪಿ.-ಶಿಕ್ಷಣ ದರ್ಶನ ಶಿಕ್ಷಣ ನಡೆದು ಬಂದ ದಾರಿ:
8. ಮಹಾಬಲೇಶ್ವರರಾವ್--ಪ್ರೌಢ ಶಿಕ್ಷಣ ಸಮಸ್ಯೆಗಳು-ಸವಾಲುಗಳು, ಶ್ರುತಿಲೋಕ ಪ್ರಕಾಶನ-2012.
9. ಕ್ಷೇತ್ರಾಧ್ಯಯನ ಮಾಹಿತಿ